INDIAN JOURNAL OF HISTORY AND ARCHAEOLOGY
ISSN (e):2582-225X
Vol-3, Issue -4, November-December, 2021,
PageNo,39-45
Peer Reviewed Journal, Referred Journal

# ಕೋಲಾರ ಜಿಲ್ಲೆಯ ಪ್ರವಾಸೋದ್ಯಮ ನೆಲೆಗಳಾಗಿ ದೇವಾಲಯಗಳು – ಒಂದು ಟಿಪ್ಪಣಿ

**ಶೈಲಜಾ ಜಿ.**[1]

ಕೋಲಾರ ಜಿಲ್ಲೆಯು ಕರ್ನಾಟಕದ ಪ್ರಮುಖ ಜಿಲ್ಲೆಗಳಲ್ಲಿ ಒಂದಾಗಿದೆ. ಕೋಲಾರ ಜಿಲ್ಲೆ ಪ್ರಾಚೀನ ಕಾಲದಿಂದ ಆಧುನಿಕ ಕಾಲದವರೆಗೆ ರಾಜಕೀಯವಾಗಿ ಮತ್ತು ಸಾಂಸ್ಕೃತಿಕವಾಗಿ ತನ್ನದೇ ಆದ ಇತಿಹಾಸವನ್ನು ಸೃಷ್ಟಿಸಿಕೊಂಡಿದೆ. ಕೋಲಾರಕ್ಕೆ ಕೋಲಾಹಲ, ಕುವಲಾಲ, ಕೊವಳಾಲ, ಕೋಳಾಲ, ಕೋಲಾಹಾರ ಎಂಬೆಲ್ಲಾ ಹೆಸರುಗಳಿಂದ ಕರೆಯಲಾಗಿದೆ. ಕೋಲಾರ ಜಿಲ್ಲೆಯ ಭಾಗದಲ್ಲಿ ಬಾಣರಸರು, ಗಂಗರು, ಪಲ್ಲವರು, ಚೋಳರು, ಹೊಯ್ಸಳರು, ವಿಜಯನಗರದ ಅರಸರು, ಮೈಸೂರು ಒಡೆಯರ್ ಇನ್ನಿತರ ದೊರೆಗಳ ರಾಜವಂಶಗಳು ಈ ಭಾಗದಲ್ಲಿ ಆಳ್ವಿಕೆ ನಡೆಸಿದ್ದಾರೆ.

ಕೋಳಾರ ಜಿಲ್ಲೆಚಿನ್ನದ ಬಿಡು, ಬಹುಶಃ ಅತಿ ಪ್ರಾಚೀನ ಕಾಲದಿಂದಲೂ ಇಲ್ಲಿನ ಸುವರ್ಣ ಸಂಪತ್ತನ್ನು ಹೊರತೆಗೆಯುವ ಕೆಲಸ ಇದ್ದಿರಬೇಕು ಎನ್ನುವುದಕ್ಕೆ ಅನೇಕ ಪುರಾತಾತ್ವಿಕ ಕುರುಹುಗಳು ದೊರೆಯುತ್ತದೆ. ಸುಮಾರು 100 ವರ್ಷಗಳ ಹಿಂದೆ ನಡೆದ ಒಂದು ಅಧ್ಯಯನದಲ್ಲಿ ಹರಪ್ಪ ಮೊಹೆಂಜೋದಾರೋಗಳಲ್ಲಿ ದೊರೆತಿರುವ ಚಿನ್ನವು ಕೋಲಾರ ಪ್ರದೇಶದಿಂದ ಬಂದದ್ದಾಗಿರಬೇಕೆಂದು ಊಹಿಸಲಾಗಿದೆ. ಇಲ್ಲಿನ ಸುವರ್ಣ ಸಂಪತ್ತು ಸ್ಥಳೀಯರಿಗೆ ಎಷ್ಟು ಆಕರ್ಷಕವೋ, ಹೊರಗಿನವರಿಗೂ ಅಷ್ಟೇ ಆಕರ್ಷಕವಾಗಿತ್ತು. ಆದಕಾರಣ ಕೋಲಾರ ಜಿಲ್ಲೆಯು ಒಂದು ಪ್ರವಾಸಿಗರ ಕೇಂದ್ರವೂ ಸಹ ಆಗಿದೆಎನ್ನಬಹುದಾಗಿದೆ.

ವಿಶಾಲ ಭಾರತದ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿ ಕಲೆ ಮತ್ತು ವಾಸ್ತುಶಿಲ್ಪಗಳು ಬೆಳೆದುಬಂದಿವೆ. ಇವೇ ಆಯಾ ಕಾಲಘಟ್ಟದ ಇತಿಹಾಸದ ಗುರುತಿಸುವಿಕೆಯಲ್ಲಿ ಮಹತ್ವದ ಕುರುಹುಗಳೂ ಆಗಿವೆ. ವಿಶೇಷವಾಗಿ ಭಾರತದ ರಾಜಮನೆತನಗಳು ಅನುಸರಿಸಿದ ಶೈಲಿ ಪ್ರಪಂಚದಲ್ಲಿಯೇ ವಿಶಿಷ್ಟ ಬಗೆಯವು. ಭಾರತದ ಸಂಸ್ಕೃತಿ ಜಾಯಮಾನಕ್ಕೆ ಒಗ್ಗಿ ಬಂದ ಈ ಕಲೆ ಮತ್ತು ವಾಸ್ತುಶಿಲ್ಪ ದೇವಸ್ಥಾನಗಳ ಮೂಲಕ ಇಂದಿಗೂ ರಾರಾಜಿಸುತ್ತವೆ. ಚರಿತ್ರೆಯ ಕಾಲಾನುಕ್ರಮದಲ್ಲಿ ರಾಜಮನೆತನಗಳ ಶ್ರೀಮಂತಿಕೆಯ ಪ್ರತಿಬಿಂಬದಂತೆ ಕಲೆ ಅರಳಿ ಬಂದಿದೆ. ಈ ನೆಲೆ ಮತ್ತು

---

1. **ಸಂಶೋಧಕರು,**ಇತಿಹಾಸ ಅಧ್ಯಯನ ಮತ್ತು ಸಂಶೋಧನಾ ವಿಭಾಗ,ಮೈಸೂರು ಮಾನಸ ಗಂಗೋತ್ರಿ, ಮೈಸೂರು

ಹಿನ್ನೆಲೆಯಲ್ಲಿ ಕೋಲಾರ ಜಿಲ್ಲೆಯ ದೇವಾಲಯಗಳ ಹಾಗೂ ಪ್ರಕೃತಿ ಸೌಂದರ್ಯದ ದೃಷ್ಟಿಯಲ್ಲಿ ಪ್ರವಾಸೋದ್ಯಮವೂ ಒಂದು ನೆಲೆಗಳಾಗಿವೆ. ಕೆಲವೊಂದು ನೆಲೆಗಳನ್ನು ಪ್ರಸ್ತುತಪಡಿಸಲಾಗಿದೆ. ಈ ಜಿಲ್ಲೆಯಲ್ಲಿ ಬಾಣರು ಆಳ್ವಿಕೆ ನಡೆಸಿದ್ದಾರೆ. ಮಹಾಬಲಿ ಬಾಣರು ಪಾಲಾರ್ ನದಿಯ ಪೂರ್ವ ಪ್ರಾಂತ್ಯವನ್ನು ಆಳಿದರು. ಬಾಣರ ಕಾಲಕ್ಕೆ ಸೇರಿದ ಶಾಸನಗಳು ಕೋಲಾರ ಜಿಲ್ಲೆಯ ನಾನಾ ಭಾಗಗಳಲ್ಲಿ ದೊರೆತಿವೆ. ಕ್ರಿ.ಶ.೩೩೮ರ ಮೂಡಿಯನೂರು ಶಾಸನವು ಈ ರಾಜವಂಶಸ್ಥರ ಹಾಗೂ ಪ್ರಮುಖ ದೊರೆಗಳ ಬಗೆಗೆ ವಿವರ ನೀಡುತ್ತದೆ. ಮಹಾಬಲಿ ಬಾಣರು ಮುಳಬಾಗಿಲು, ಬಂಗಾರಪೇಟೆ, ಶ್ರೀನಿವಾಸಪುರ, ಚಿಂತಾಮಣಿಗಳಲ್ಲಿ ಇವರು ಆಳುತ್ತಿದ್ದರೆಂಬುದಕ್ಕೆ ಅವರ ಶಾಸನಗಳು ಆಧಾರವನ್ನು ನೀಡುತ್ತವೆ. ಬಾಣರ ರಾಣಿ ರತ್ನಾವಳಿ ಜಿಲ್ಲೆಯ ಅತಿ ಪ್ರಾಚೀನವಾದ ಬೋಗನಂದೀಶ್ವರ ದೇವಾಲಯವನ್ನು ಕಟ್ಟಿಸಿ ಪ್ರಖ್ಯಾತಳಾಗಿದ್ದಾಳೆ. ಕೋಲಾರದ ನಂದಿ ಗ್ರಾಮ ಪ್ರವಾಸಿಗರ ಒಂದು ತಾಣವಾಗಿದೆ.

ಕೋಲಾರ ಜಿಲ್ಲೆ ಚಿಕ್ಕಬಳ್ಳಾಪುರ ತಾಲ್ಲೂಕಿನ ನಂದಿಬೆಟ್ಟದ ತಪ್ಪಲಿನಲ್ಲಿರುವ ನಂದಿಗ್ರಾಮ ಅತ್ಯಂತ ಬಹುಪ್ರಾಚೀನವಾದ ಪುಣ್ಯಕ್ಷೇತ್ರ. ದಕ್ಷಿಣ ಕಾಶಿಯೆಂದೇ ಪ್ರಸಿದ್ಧವಾಗಿರುವ ಈ ನೆಲೆ ಆಕರ್ಷಣೆ, ಅಲ್ಲದೆ ಇಲ್ಲಿರುವ ಎರಡು ಶಿವದೇವಾಲಯಗಳು, ಭೋಗನಂದೀಶ್ವರ ಮತ್ತು ಅರುಣಾಚಲೇಶ್ವರ ದೇವಾಲಯಗಳೆಂದು ಹೆಸರು ವಾಸಿಯಾಗಿದೆ. ಈ ದೇವಾಲಯಗಳು ಒಂದೇ ಆವರಣದಲ್ಲಿ ಅಕ್ಕಪಕ್ಕಗಳಲ್ಲಿ ಹೆಚ್ಚು ಕಡಿಮೆ ಒಂದೇ ಮಾದರಿಯಲ್ಲಿಯೇ ಅದು ಅಲ್ಲದೆ ಒಂದೇ ಶೈಲಿಯಲ್ಲಿಯೇ ನಿರ್ಮಾಣಗೊಂಡ ದೇವಾಲಯಗಳಾಗಿವೆ.

ನಂದಿಯ ಇವೆರಡು ದೇವಾಲಯಗಳು ದಕ್ಷಿಣ ಕರ್ನಾಟಕದ ಅತ್ಯಂತ ಪ್ರಾಚೀನ ದೇವಾಲಯಗಳಾಗಿವೆ. ಇವೆರಡು ದೇವಾಲಯಗಳ ಕಾಲ ನಿಖರವಾಗಿ ತಿಳಿಯದಿದ್ದರೂ ಕೂಡ ಕ್ರಿ.ಶ. ೮೦೬ರ ರಾಷ್ಟ್ರಕೂಟ ಮೂರನೆಯ ಗೋವಿಂದನ ನಂದಿ ತಾಮ್ರಪಟವೊಂದರ ಶಾಸನದಿಂದ ಈ ಮಹಾನಂದೀಶ್ವರ ದೇವಾಲಯವು ಕ್ರಿ.ಶ. ೮೦೬ರಲ್ಲಿ ಅಸ್ತಿತ್ವದಲ್ಲಿತ್ತೆಂದೂ ತಿಳಿದುಬರುತ್ತದೆ.

ಅದೇ ದೇವಾಲಯ ಕ್ರಿ.ಶ. ೮೧೦ರ ಮತ್ತೊಂದು ತಾಮ್ರಪಟದಲ್ಲಿ ಬಾಣವಂಶದದೊರೆ ಬಣ ವಿದ್ಯಾಧರನರಾಣಿ ರತ್ನಾವಳಿಯು ನಂದಿಯಲ್ಲಿ ಶಿವಾಲಯವೊಂದನ್ನು ನಿರ್ಮಿಸಿದಳೆಂದು ತಿಳಿದುಬರುತ್ತದೆ. ಕ್ರಿ.ಶ. ೯ನೇ ಶತಮನಾದ ಕೊನೆಯ ಭಾಗದ ಒಂದು ಕಲ್ಲಿನ ಶಾಸನವು ದ್ವಾಲಯ ಆವರಣದಲ್ಲಿ ಕಂಡುಬಂದಿದ್ದು, ಅವು ನೊಳಂಬಾಧಿರಾಜನ ಕಾಲದಲ್ಲಿ ನಂದಿಯ ದೇವಾಲಯಕ್ಕೆ ವಿಮಾನದ ನಿರ್ಮಾಣವಾಯಿತೆಂದು ಸೂಚಿಸುತ್ತದೆ. ಹೀಗಾಗಿ ಬಾಣರಾಣಿ ರತ್ನಾವಳಿ ಮಾಡಿಸಿದ ಮಹಾನಂದೀಶ್ವರ ದೇವಾಲಯ ಯಾವುದು, ನೊಳಂಬಾಧಿರಾಜನ ಕಾಲದಲ್ಲಿ ನಿರ್ಮಾಣವಾದ ನಂದಿ ದೇವಾಲಯ ಯಾವುದು ಎಂಬುದರ ಬಗೆಗೆ ವಿದ್ವಾಂಸರಲ್ಲಿ ಜಿಜ್ಞಾಸೆ ಇದೆ. ಶೈಲಿಯ ದೃಷ್ಟಿಯಿಂದ

ನೋಡಿದಾಗ ಭೋಗ ನಂದೀಶ್ವರ ದೇವಾಲಯ ಅರುಣಾಚಲೇಶ್ವರ ದೇವಾಲಯಕ್ಕಿಂತ ಸ್ವಲ್ಪ ಪ್ರಾಚೀನವಾದದ್ದೆಂದು ತಿಳಿಯಬಹುದಾಗಿದೆ. ಇದೊಂದು ಪ್ರಮುಖ ಪ್ರವಾಸಿ ತಾಣವಾಗಿದೆ.

**ನಂದಿಬೆಟ್ಟ**

ನಂದಿಬೆಟ್ಟ ಅಥವಾ ನಂದಿದುರ್ಗ ಕರ್ನಾಟಕ ರಾಜ್ಯದ ಪ್ರಖ್ಯಾತ ಗಿರಿಧಾಮಗಳಲ್ಲಿ ಒಂದು. ಇದು ಸಮುದ್ರಮಟ್ಟದಿಂದ ಇದರ ಗರಿಷ್ಠ ಎತ್ತರ 4850 ಅಡಿಗಳು. ಶಾಸನಗಳ ಹಿನ್ನೆಲೆಯಿಂದ ನಂದಗಿರಿ ಎಂದು ಕರೆಯಲಾಗಿದೆ. ಗಂಗರ ಹೆಸರುಗಳಲ್ಲಿಯೂ ನಂದಗಿರಿನಾಥ ಎಂಬ ಉಲ್ಲೇಖಗಳಿವೆ. ಗಿರಿ ಪ್ರದೇಶಗಳಲ್ಲಿ ಪಾಲಾರ್, ದಕ್ಷಿಣ ಪೆನ್ನಾರ್, ಚಿತ್ರಾವತಿ, ಅರ್ಕಾವತಿ ಮತ್ತು ಪಾಪಾಘ್ನಿ ನದಿಗಳು ನಂದಿಬೆಟ್ಟದ ಶ್ರೇಣಿಗಳಲ್ಲಿ ಹುಟ್ಟುತ್ತವೆ. ಕೂಷ್ಮಾಂಡಋಷಿಯು ಇಲ್ಲಿ ತಪಸ್ಸು ಮಾಡುತ್ತಿದ್ದುದರಿಂದ ಈ ಬೆಟ್ಟಕ್ಕೆಕೂಷ್ಮಾಂಡಗಿರಿ ಎಂದು ಹೆಸರು ಬಂದಿತೆಂದು ಹೇಳಲಾಗುತ್ತದೆ. ಇದರ ಸಮೀಪವಿರುವ ಗೋಪಿನಾಥ ಬೆಟ್ಟದಲ್ಲಿರುವ ಜೈನ್ ಶಾಸನಗಳಲ್ಲಿ ಈ ಬೆಟ್ಟವನ್ನು ನಂದಗಿರಿ ಎಂದು ಉಲ್ಲೇಖಿಸಲಾಗಿದೆ. ನಂದಿಬೆಟ್ಟದ ಯೋಗನಂದೀಶ್ವರ ದೇವಾಲಯ ಗಂಗರ, ನೊಳಂಬ, ಪಲ್ಲವ, ಚೋಳ, ಹೊಯ್ಸಳರ ಕಾಲದಲ್ಲಿಯೂ ಸಾಕಷ್ಟು ಬದಲಾವಣೆಗಳಾಗಿವೆ. ಇಂದಿಗೂ ಇಲ್ಲಿಯ ಆರಾಧನೆ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. ಪ್ರತಿನಿತ್ಯ ಸಾವಿರಾರು ಪ್ರವಾಸಿಗರು ಬಂದು ಹೋಗುತ್ತಿದ್ದಾರೆ.

ಕೋಲಾರದ ಕೋಲಾರಮ್ಮನ ದೇವಾಲಯವು ಮೊದಲಿಗೆ ಗಂಗರ ಕಾಲಕ್ಕೆ ನಿರ್ಮಿತವಾದ ದೇವಾಲಯವಾಗಿದೆ. ತದನಂತರ ಚೋಳರ ಕಾಲದಲ್ಲಿ ಬೆಳವಣಿಗೆಯನ್ನು ಹೊಂದಿದೆ. ಕೋಲಾರಮ್ಮ ಕೋಲಾರದ ಗ್ರಾಮದೇವತೆಯಾಗಿದ್ದಾಳೆ. ಇದೇ ಅಲ್ಲದೆ ಶಕ್ತಿಪ್ರಧಾನಾ ಅದಿ ದೇವತೆಯೂ ಕೂಡ ಹೌದು. ಕೋಲಾರದಲ್ಲಿ ಮತ್ತೊಂದು ಸೋಮೇಶ್ವರ ದೇವಾಲಯವಾಗಿದೆ. ಇದು ಅತ್ಯಂತ ಸುಂದರ ವಾಸ್ತುಶಿಲ್ಪ ಸೌಂದರ್ಯವ್ನನು ಹೊಂದಿರುವ ದ್ರಾವಿಡ ಶೈಲಿಯ ದೇವಾಲಯವಾಗಿದೆ. ಈ ಸೋಮೇಶ್ವರ ದೇವಾಲಯವು ಹೊಯ್ಸಳ ಮತ್ತು ದ್ರಾವಿಡ ಶೈಲಿಯ ಒಂದು ಸಮ್ಮಿಶ್ರಣವಾಗಿದೆ. ಈ ದೇವಾಲಯವನ್ನು ಯಾರು ಕಟ್ಟಿಸಿದರೆಂದು ತಿಳಿದುಬರುವುದಿಲ್ಲ. ಆದರೆ ಹೊಯ್ಸಳ ಶಿಲ್ಪಗಳ ನಿರ್ಮಾಣವೆಂದು ನಿಸ್ಸಂದೇಹವಾಗಿ ಹೇಳಬಹುದಾಗಿದೆ. ದೇವಾಲಯವು ದ್ರಾವಿಡ ಮಾದರಿಯಲ್ಲಿದೆ. ಕಲ್ಯಾಣ ಮಂಟಪ ಮತ್ತು ಮಹಾದ್ವಾರಗಳನ್ನು ವಿಶೇಷವಾಗಿ ಅಲಂಕರಿಸಲಾಗಿದೆ. ಹೊರಗೋಡೆಯು ಶುದ್ಧ ದ್ರಾವಿಡ ರೀತಿಯಲ್ಲಿದ್ದರೂ ಅದರ ಮೇಲೆ ಮಾಡಿರುವ ಕೆತ್ತನೆಯ ಕಾರ್ಯಗಳು ಅತ್ಯುತ್ತಮವಾಗಿದೆ. ಸಿಂಹಗಳನ್ನು ಎದುರಿಸುತ್ತಿರುವ ಆನೆಗಳು, ಹಂಸಗಳು ಇನ್ನಿತರ ಮಾನವ ಸ್ವರೂಪ ಮೂರ್ತಿಗಳು ಮೊದಲ ಸಾಲಿನಲ್ಲಿವೆ. ಎರಡನೆಯ ಸಾಲಿನಲ್ಲಿ ಹೂವಿನ ಅಲಂಕರಣೆ ಇದೆ. ಮೂರನೇ ಸಾಲಿನಲ್ಲಿ ಕೀರ್ತಿ ಮುಖಗಳಿವೆ. ನಾಲ್ಕನೆಯ ಸಾಲಿನ ಯಕ್ಷ, ಕಿನ್ನರ ಲೋಕವನ್ನು ಸೃಷ್ಟಿಸುವ ಶಿಲ್ಪಗಳಿವೆ. ಇದೊಂದು ಪವಿತ್ರ ಶೈವ ಧಾರ್ಮಿಕ ನೆಲೆ, ಪ್ರತಿ ದಿನ ಸಾವಿರಾರು ಪ್ರವಾಸಿಗರು ಬಂದು ಹೋಗುತ್ತಾರೆ.

**ಅವನಿ**

ಮುಳಬಾಗಿಲು ತಾಲ್ಲೂಕಿನಲ್ಲಿ ಅವನಿ ಎಂಬ ಊರು ಇದೆ. ಪ್ರಾಚೀನ ಊರುಗಳಲ್ಲಿ ಇದು ಒಂದು. ಇದೊಂದು ಜನಪ್ರಿಯತೆಯನ್ನು ಹೊಂದಿರುವ ಧಾರ್ಮಿಕ ತಾಣವಾಗಿದೆ. ಇದನ್ನು ಅವಂತಿಕಾ ಕ್ಷೇತ್ರವೆಂದೂ ಕೂಡ ಕರೆಯುವ ಪರಂಪರೆಯೇ ಇದೆ. ಕ್ರಿ.ಶ. 970ರ ಒಂದು ಶಾಸನದಲ್ಲಿ ಅವನಿಯೆಂದು ಕರೆಯಲಾಗಿದೆ. ಅವನಿಯಲ್ಲಿ ಹಲವಾರು ದೇವಾಲಾಯಗಳಿವೆ. ಅವುಗಳೆಂದರೆ; ಶತೃಘ್ನೇಶ್ವರ, ಲಕ್ಷ್ಮಣೇಶ್ವರ, ರಾಮೇಶ್ವರ, ಭರತೇಶ್ವರ, ಆಂಜನೇಶ್ವರ, ಅಂಗದ, ಸುಗ್ರೀವ, ವಾಲಿ, ಷಣ್ಮುಖರ ದೇವಾಲಯಗಳಿವೆ. ತ್ರಿಭುವನಕರ್ತಾರನ ಕಾಲಕ್ಕೆ ಕ್ರಿ.ಶ. 921 ರಿಂದ 960ರವರೆಗೆ ಈ ಅವನಿ ಕ್ಷೇತ್ರ ಹೆಚ್ಚು ಪ್ರಸಿದ್ಧಿಯನ್ನು ಪಡೆದಿತ್ತು. ಇಲ್ಲಿಯ ಲಕ್ಷ್ಮಣೇಶ್ವರ ದೇವಾಲಯ ಈತನ ಕಾಲಕ್ಕೆ ಸೇರಿದ್ದು, ಅದರ ಸೋಮಸೂತ್ರದ ಬಳಿ ಈ ತ್ರಿಭುವನಕರ್ತಾರನ ಶಿಲ್ಪವಿದೆ. ಈತನು ಅವನ್ಯ ದತಪೋ ರಾಜ್ಯದ ಸ್ಥಾನಿಕನಾಗಿದ್ದಾಗ ಐವತ್ತು ದೇವಾಲಯಗಳನ್ನು ಎರಡು ದೊಡ್ಡಕೆರೆಗಳನ್ನು ನಿರ್ಮಿಸಿದನೆಂದು ತಿಳಿದುಬರುತ್ತದೆ. ಈತನು ಮರಣ ಹೊಂದಿದಾಗ, ಈತನ ಶಿಷ್ಯನಾದ ಮಹೇಂದ್ರಭಟ್ಟ ಇವನ ನೆನಪಿನಲ್ಲಿ ದೇವಾಲಯವನ್ನು ಕಟ್ಟಿಸಿದನೆಂದು ತಿಳಿದುಬರುತ್ತದೆ. ನೊಳಂಬರ ದೀವಬ್ಬರಸೀ ನೊಳಂಬ ನಾರಾಯಣೇಶ್ವರ ದೇವಾಲಯವನ್ನು ಕಟ್ಟಿಸಿರುವುದಾಗಿ ಶಾಸನ ಪಾಠದಿಂದ ತಿಳಿದುಬರುತ್ತದೆ. ಈ ಊರಿನಲ್ಲಿ ಲಕ್ಷ್ಮಣೇಶ್ವರ ದೇವಾಲಯಗಳ ಅಧಿಷ್ಠಾನದಲ್ಲಿ ಮತ್ತು ಮಾನಸ್ತಂಭದ ಮೇಲೆ ಶಾಸನಗಳಿವೆ. ಒಟ್ಟಾರೆ ಅವನಿ ಒಂದು ಧಾರ್ಮಿಕ ಹಾಗೂ ಪ್ರವಾಸೋದ್ಯಮದ ತಾಣವಾಗಿದೆ.

**ರಂಗಸ್ಥಳ**

ಚಿಕ್ಕಬಳ್ಳಾಪುರದ ಬಳಿಯಲ್ಲಿರುವ ರಂಗಸ್ಥಳವೂ ಒಂದು ಪ್ರಮುಖ ಧಾರ್ಮಿಕ ಕ್ಷೇತ್ರವೇ ಆಗಿರುತ್ತದೆ ಎಂದು ಗುರುತಿಸಬಹುದು. ಈಗ ಇದೊಂದು ಧಾರ್ಮಿಕ ದೃಷ್ಟಿಯಿಂದ ಪ್ರವಾಸಿಗರ ತಾಣವಾಗಿದೆ. ಪ್ರತಿ ನೂರಾರು ಪ್ರವಾಸಿಗರು ಬಂದು ಹೋಗುತ್ತಾರೆ. ಇಲ್ಲಿರುವ ದೇವಾಲಯ ವೈಷ್ಣವ ದೇವಾಲಯವಾಗಿದ್ದು, ಮೂಲ ಗರ್ಭಗುಡಿಯಲ್ಲಿ ಸುಮಾರು ನಾಲ್ಕೂವರೆ ಅಡಿ ಉದ್ದದ ರಂಗನಾಥಮೂರ್ತಿ ಆದಿಶೇಷನ ಮೇಲೆ ಯೋಗ ನಿದ್ರೆಯಲ್ಲಿ ಮಲಗಿದ್ದಾನೆ. ಸ್ವಾಮಿಯ ಪಾದದ ಬಳಿ ಶ್ರೀದೇವಿ ಭೂದೇವಿಯರು ಕುಳಿತಿದ್ದಾರೆ. ಮುಖಮಂಟಪ ದೇವಾಲಯದ ಬಹು ಆಕರ್ಷಕ ಭಾಗ. ಇಲ್ಲಿರುವ 24 ಕಂಬಗಳು ಸುಂದರವಾದ ಉಬ್ಬು ಶಿಲ್ಪಗಳಿಂದ ಕಂಗೊಳಿಸುವ ಸುಂದರವಾದ ಉಬ್ಬು ಶಿಲ್ಪಗಳಿಂದ ಕಂಗೊಳಿಸುತ್ತಿದೆ. ಕಲಾತ್ಮಕವಾದ ಧ್ವಜಸ್ತಂಭ ಈ ದೇವಲಯದ ಹತ್ತಿರವೇ ಶಂಖತೀರ್ಥ ಮತ್ತು ಚಕ್ರತೀರ್ಥಗಳಿಂದ ಕೂಡಿದ ಪುಷ್ಕರಣಿಗಳಿವೆ. ಒಟ್ಟಾರೆ ರಂಗಸ್ಥಳ ಧಾರ್ಮಿಕ ಹಿನ್ನೆಲೆಯಿಂದ ಒಂದು ಪ್ರವಾಸೋದ್ಯಮ ತಾಣವಾಗಿದೆ. ಈ ದೇವಾಲಯದಲ್ಲಿ ಶ್ರೀವೈಷ್ಣವ ಆಚಾರ್ಯರುಗಳಾದ ವಿಶ್ವಕ್ಸೇನರಾಮಾನುಜ, ನಮ್ಮಾಳ್ವಾರ್ ಮತ್ತು ಚಕ್ರಾತ್ರಾಳ್ವಾರ್‌ಗಳ ಲೋಹದ ಪ್ರತಿಮೆಗಳಿವೆ. ಇಲ್ಲಿ

ನಡೆಯುವ ಉತ್ಸವಗಳಲ್ಲಿ ಮಾರ್ಗಶಿರ ಶುದ್ಧಪೂರ್ಣಿಮದಂದು ನಡೆಯುವ ಬ್ರಹ್ಮೋತ್ಸವ, ಮುಕ್ಕೋಟಿ ಏಕಾದಶಿ ದಸರ ವಿಶೇಶ ಸೇವೆ ಮತ್ತು ಶ್ರೀರಾಮನವಮಿಯ ಉತ್ಸವಗಳು ರಂಗಸ್ಥಳದಲ್ಲಿ ಜರುಗುತ್ತವೆ. ಆದಕಾರಣ ಇಲ್ಲಿಗೆ ವಿಶೇಷವಾಗಿ ಶ್ರೀವೈಷ್ಣವ ಧರ್ಮೀಯರು ಸಾಕಷ್ಟು ಸಂಖ್ಯೆಯಲ್ಲಿ ಬರುತ್ತಿದ್ದಾರೆ.

**ಕುರುಡುಮಲೆ**

ಮುಳಬಾಗಿಲನಿಂದ ಸುಮಾರು ಒಂಭತ್ತು ಕಿಲೋಮೀಟರ್ ದೂರದಲ್ಲಿ ಕುರುಡು ಮಲೆತಾಣ ಇದೆ. ಈ ತಾಣಕ್ಕೆ ಕುರುಡಿಮಲ್ಲೈ, ಕೂಡುಮಲೆ ಎಂದು ಕರೆಯಲಾಗಿದೆ. ಈ ತಾಣ ಇಲ್ಲಿಯ ಬೆಟ್ಟದ ತಪ್ಪಲಿನಲ್ಲದೆ. ಚೋಳರ ಆಡಳಿತದ ಕಾಲದಲ್ಲಿ ಇದೊಂದು ಪ್ರಾಚೀನ ಪುಣ್ಯಕ್ಷೇತ್ರವಾಗಿತ್ತು. ಅದು ನಿರಂತರವಾಗಿ ಸಾಗುತ್ತಾ ಬಂದಿದೆ. ಈ ತಾಣದಲ್ಲಿ ಸಾಕಷ್ಟು ಪ್ರಾಚೀನ ಕಾಲದ ದೇವಾಲಯಗಳವೆ. ಅವುಗಳಲ್ಲಿ ಗಣಪತಿ, ಚನ್ನರಾಯಸ್ವಾಮಿ, ಸೋಮೇಶ್ವರ, ಕಾಶೀ ವಿಶ್ವೇಶ್ವರ, ನಗರೇಶ್ವರ ದೇವಾಲಯಗಳು ಪ್ರಮುಖವಾಗಿವೆ. ಗಣೇಶನ ದೇವಾಲಯ ಇರುವ ಸ್ಥಳಕ್ಕೆ ಕೂಡುಮಲ್ಲೈ ಎಂದು ಹೆಸರನ್ನು ನೀಡಿತೆಂದು ಐತಿಹ್ಯವಿದೆ. ಸ್ಥಳೀಯರ ಪ್ರಕಾರ ಪ್ರತಿಯೊಂದು ದೇವತೆಗೂ ಗಣೇಶನನ್ನು ಆರಾಧಿಸಲು ಕೂಡಿದ ಬೆಟ್ಟದ ತಪ್ಪಲಿನ ಈ ತಾಣವೇ ಕೂಡುಮಲ್ಲೈ ಆಗಿ ತದನಂತರ ಕಾಲಕ್ಕೆ ಕುರುಡುಮಲೆ ಆಗಿ ಕಾಲಾನುಕಾಲಕ್ಕೆ ರೂಢಿಗೆ ಬಂದಿತ್ತೆಂದು ಇತಿಹಾಸಕಾರರು ವ್ಯಕ್ತಪಡಿಸುತ್ತಾರೆ. ಈ ಬೆಟ್ಟಕ್ಕೆ ಪೌರಾಣಿಕವಾಗಿ ಕೌಂಡಿನ್ಯಗಿರಿ ಅಥವಾ ಕೌಂಡಿಣ್ಯ ಕ್ಷೇತ್ರ ಎಂದು ಕರೆಯಲಾಗಿದೆ. 1260ರಲ್ಲಿ ಹೊಯ್ಸಳರ ಅಧಿಕಾರಿ ಶೆಟ್ಟಾಳ್ವರ್ ವಾಸುದೇವರ್ ಉರುಫ್ ಜಯಗೊಂಡ ಚೋಳ ಇಳವಂಜಿರಾಯನು ಕುರುಡಿಮಲ್ಲೈನ ಕೊತ್ತಾಂಡು ದೇವ ನಲ್ಲೂರು ಅಥವಾ ಶ್ರೀವಾಸುದೇವ ಪೆರುಮಾಳ್ ದೇವರಿಗೆ ಶಾಶ್ವತ ನಂದಾದೀಪ ದಾನವನ್ನು ಅಲ್ಲದೆ ಇನ್ನಿತರ ದೈನಂದಿನ ಕೈಂಕರ್ಯಗಳಿಗೆ ದಾನಗಳನ್ನು ನೀಡಿರುವ ಕುರಿತು ತಿಳಿದುಬರುತ್ತದೆ. ಆದಕಾರಣ ಧಾರ್ಮಿಕವಾಗಿಯೂ ಅಲ್ಲದೆ ಪ್ರವಾಸೋದ್ಯಮದ ಹಿನ್ನೆಲೆಯಲ್ಲಿಯೂ ಕುರುಡುಮಲ್ಲೈ ಪ್ರಮುಖ ಸುಂದರ ತಾಣವಾಗಿದೆ.

**ಕೈವಾರ**

ಚಿಂತಾಮಣಿ ತಾಲ್ಲೂಕಿನ ಒಂದು ಗ್ರಾಮ ಕೈವಾರ. ಇದೊಂದು ಹೋಬಳಿ ಕೇಂದ್ರ. ಕೈವಾರವನ್ನು ಮಹಾಭಾರತದಲ್ಲಿ ಬರುವ ಏಕಚಕ್ರಪುರವೆಂದು ಹೇಳುವರು. ಕೈವಾರ ಅಮರನಾರಾಯಣ, ಧರ್ಮರಾಯ, ಭೀಮೇಶ್ವರ, ಅರ್ಜುನೇಶ್ವರ, ನಕುಲೇಶ್ವರ, ಸಹದೇವೇಶ್ವರ ಎಂಬೆಲ್ಲಾ ದೇವಾಲಯಗಳವೆ. ಈ ದೇವಲಯಗಳು ಕ್ರಿ.ಶ.1283ಕ್ಕೂ ಮೊದಲೇ ಇದ್ದವೆಂದು ಇಲ್ಲಿರುವ ತಮಿಳು ಶಾಸನಗಳಿಂದ ತಿಳಿದುಬರುತ್ತದೆ. ಕೈವಾರದಲ್ಲಿ ಆಳ್ವಿಕೆ ನಡೆಸಿದ ಎಲ್ಲಾ ಅರಸರು ಸರ್ವಧರ್ಮ ಸಹಿಷ್ಣುಗಳಾಗಿ ಎಲ್ಲಾ ಧರ್ಮಗಳನ್ನು ಸಮಾನವಾಗಿ ಗೌರವಿಸುತ್ತಿದ್ದರು. ಕ್ರಿ.ಶ. 1286ರ ಶಾಸನದಲ್ಲಿ

ಹೊಯ್ಸಳ ರಾಮನಾಥದೇವನ ಆಡಳಿತದಲ್ಲಿ ಹಿಂದೆ ಪೆರುಮಾಳ್ ಎಂಬ ಅಧಿಕಾರಿಯು ನೊಂಬ್ಬುಗುಡಿ (ನಂದಗುಡಿ) ಯಲ್ಲಿ ಅಮರ ನಾರಾಯಣ ದೇವರಿಗೆ ದತ್ತಿಬಿಟ್ಟ ವಿಚಾರವನ್ನು ಹಾಗೂ ರಾಜನಾರಾಯಣ ಬ್ರಹ್ಮಾದಿರಾಜ ವಾಸುದೇವನು ಕೈವಾರದ ಇದೇ ದೇವರಿಗೆ ದತ್ತಿಬಿಟ್ಟ ಹಲವು ಭೂದಾನಗಳನ್ನು ತಿಳಿಸುತ್ತದೆ. ಇಲ್ಲಿ ಶಕ್ತಿಪ್ರಧಾನವಾದ ದುರ್ಗಾಮಾತೆ ದೇವಾಲಯ ಇದೆ. ಕೈವಾರ ನಾರೇಯಣಯೋಗಿ ಆಶ್ರಮವೂ ಕೂಡ ಇದೆ. ಇವರು ಪ್ರಸಿದ್ಧ ಸಂತರು ಆಗಿದ್ದರು. ನಾರಾಯಣಪ್ಪನವರು ವಿರಕ್ತರಾಗಿ ಸಂನ್ಯಾಸವನ್ನು ಸ್ವೀಕರಿಸಿ ಯೋಗ ಸಾಧನೆಯಲ್ಲಿ ನಿರತರಾಗಿ ನಾರೇಯಣ ಯೋಗಿಗಳು, ನಾರೇಯಣಯತಿಗಳು ಕೈವಾರತಾತಾರವರ ವಿಖ್ಯಾತರಾದರು.

ಪ್ರಸ್ತುತ ಕೈವಾರ ತಾತಾರವರ ಹೆಸರಿನಲ್ಲಿ ಸಾಕಷ್ಟು ಧಾರ್ಮಿಕ ಕಾರ್ಯಗಳು ಜರುಗುತ್ತಿವೆ. ಇಲ್ಲಿಗೂ ಸಹ ಸಾಕಷ್ಟು ಪ್ರವಾಸಿಗರು ದಿನನಿತ್ಯ ಬರುತ್ತಿದ್ದಾರೆ. ಒಟ್ಟಾರೆ ಈ ಒಂದು ಲೇಖನದಿಂದ ಕೋಲಾರ ಜಿಲ್ಲೆಯ ಕೆಲವೇ ಕೆಲವು ಧಾರ್ಮಿಕ ನೆಲೆಯಲ್ಲಿ ಪ್ರವಾಸೋದ್ಯಮ ಹೆಸರಿನಲ್ಲಿ ಭಕ್ತರು ಬರುತ್ತಿದ್ದಾರೆ. ಕರ್ನಾಟಕ ರಾಜ್ಯದ ಪೂರ್ವ ಅಂಚಿನಲ್ಲಿರುವ ಒಂದು ಜಿಲ್ಲಾ ಕೇಂದ್ರವಲ್ಲದೆ ಹಲವಾರು ತಾಲ್ಲೂಕುಗಳನ್ನು ಒಳಗೊಂಡಿದ್ದು, ಈ ಜಿಲ್ಲೆಗೆ ಧಾರ್ಮಿಕ ಹಿನ್ನೆಲೆಯಲ್ಲಿ ಹಾಗೂ ಪ್ರವಾಸೋದ್ಯಮದ ಹಿನ್ನೆಲೆಯಲ್ಲಿ ಕರ್ನಾಟಕ ಅಲ್ಲದೆ ಆಂಧ್ರಪ್ರದೇಶ, ತಮಿಳುನಾಡು ಸಾಕಷ್ಟು ಭಾಗಗಳಿಂದ ಭಕ್ತರು ಬರುತ್ತಿದ್ದಾರೆ. ಕ್ರಿ.ಶ. 4ನೆಯ ಶತಮಾನದಿಂದಲೂ ತಲಕಾಡಿನ ಗಂಗ ಅರಸ್ದರು ಮೂಲತಃ ಕೋಲಾರದವರಾಗಿದ್ದು ತಮ್ಮನ್ನು ಕೋಳಾಲ ಅಥವಾ ಕುವಲಾಲ ಪುರವರಾಧೀಶ್ವರರೆಂದು ಕರೆದುಕೊಂಡಿದ್ದಾರೆ. ರಾಜರಾಜ ಚೋಳನು ಗಂಗವಾಡಿಯನ್ನು ತನ್ನ ಅಧಿಕಾರದ 22ನೇ ವರ್ಷದಲ್ಲಿ ಕೋಲಾರವನ್ನು ಆಕ್ರಮಿಸಿಕೊಂಡ ಮೇಲೆ ಈ ಜಿಲ್ಲೆಯಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದಾರೆ. ಕೋಲಾರ ನಗರದಲ್ಲಿರುವ ಕೇಂದ್ರ ಪುರಾತತ್ವ ಇಲಾಖೆಯಿಂದ ಸಂರಕ್ಷಿಸಲಾಗಿರುವ ಸೋಮೇಶ್ವರ ದೇವಾಲಯ ಅತ್ಯಂತ ಸುಂದರ ವಾಸ್ತುಶಿಲ್ಪ ಸೌಂದರ್ಯವನ್ನು ಹೊಂದಿರುವ ಶುದ್ಧದ್ರಾವಿಡ ಶೈಲಿಯ ಆಲಯವಾಗಿದೆ. ಇದೊಂದು ಚೋಳರ ಕಾಲದ ಉತ್ತಮ ಪ್ರತೀಕವಾಗಿದೆ. ಹೀಗಾಗಿ ಈ ಜಿಲ್ಲೆಯು ಸಾಕಷ್ಟು ದೇವಾಲಯಗಳ ರಾಜ್ಯ ಮತ್ತು ಕೇಂದ್ರ ಪುರಾತತ್ವ ಇಲಾಖೆಯಿಂದ ಸಂರಕ್ಷಿಸಲಾಗಿರುವ ಆಲಯಗಳಿವೆ. ಅಲ್ಲದೆ ಸಾಕಷ್ಟು ದೇವಾಲಯಗಳು ದುಃಸ್ಥಿತಿಯಲ್ಲಿವೆ. ಈ ಎಲ್ಲಾ ಬೆಳವಣಿಗೆಯಿಂದ ಕೇಂದ್ರ ಮತ್ತು ರಾಜ್ಯಗಳು ಪ್ರಾಚೀನಕಾಲದ ಸ್ಮಾರಕಗಳನ್ನು ಪಟ್ಟಿಮಾಡಿ ದೇವಾಲಯಗಳ ಜೀರ್ಣೋದ್ಧಾರ ಮಾಡಿ ಧಾರ್ಮಿಕ ಪ್ರವಾಸಿಗರಿಗೆ ಅನುಕೂಲ ಮಾಡಿಕೊಡಬೇಕಾಗಿದೆ.

ಒಟ್ಟಾರೆಯಾಗಿಯೇ ಹೇಳುವುದಾದರೆ; ಕೋಲಾರ ಜಿಲ್ಲೆಯಲ್ಲಿ ಜೈನ, ಕ್ರೈಸ್ತ ಮುಸ್ಲಿಂ ಹಾಗೂ ಇನ್ನಿತರ ಧರ್ಮಗಳಿಗೆ ಸಂಬಂಧಪಟ್ಟಂತೆ ದೇವಾಲಯಗಳಿವೆ. ಆದರೆ ಪ್ರಸ್ತುತ ಕೆಲವೇ ಕೆಲವು ಪ್ರಾಚೀನ ದೇವಲಯಗಳು ಪ್ರವಾಸಿ ತಾಣವಾಗಿರುವ ತಾಣವಾಗಿರುವುದನ್ನು ಮಾತ್ರ ತಿಳಿಸಲಾಗಿರುತ್ತದೆ.

**ಗ್ರಂಥಸೂಚಿ**

1. ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ–ಕೋಲಾರ, ಪ್ರಕಟಣೆ ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 1979
2. ಕೋಲಾರ ಜಿಲ್ಲೆಯ ಗ್ಯಾಸೆಟಿಯರ್–ಕರ್ನಾಟಕ ಸರ್ಕಾರ, ಪ್ರಕಟಣೆ 2005.
3. ಎಂ.ಎ.ಆರ್ – 1932
4. ಎಂ.ಎ.ಆರ್ – 1930
5. ಎಂ.ಎ.ಆರ್ – 1935
6. ಎಂ.ಎ.ಆರ್ – 1910
7. ಎ.ಕ.ಸಂಪುಟ–10, ಮುಳಬಾಗಿಲು, ಶಾಸನ ಸಂಖ್ಯೆ – 43, 65 ಮತ್ತು 67
8. ಹೆಚ್.ಚಿತ್ತರಂಜನ್ (ಸಂ), ಕೋಲಾರ ಜಿಲ್ಲೆ, ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಬೆಂಗಳೂರು, ಪ್ರಕಟಣೆ 2005